

ಋತ ಇಷ್ಟು ಹೊತ್ತಿಗೆ ಆಫೀಸಿನಲ್ಲಿ ಇರಲೇಬೇಕಿತ್ತು; ಹುಡುಗರೆಲ್ಲಾ ತಮ್ಮ ಪಾಲಿನ ಕೆಲಸವನ್ನು ನಿನ್ನೆ ರಾತ್ರಿಯೇ ಮುಗಿಸಿ ಇವನಿಗಾಗಿ ಕಾಯುತ್ತಿರುತ್ತಾರೆ. ಇವತ್ತು ಶುಕ್ರವಾರ; ಪ್ರಾಡಕ್ಟ್ ರಿಲೀಸ್ ಉಂಟೋ ಇಲ್ಲವೋ ಎಂದು ಯಾರೂ ಕೇಳುವುದೂ ಇಲ್ಲ–ಹೇಳುವುದೂ ಇಲ್ಲ. ಫೋನು ಎರಡೆರಡು ಬಾರಿ ಬೆಳಗಿ ಕಪ್ಪಾಯಿತು; ಡೆಲಿವರಿ ಹುಡುಗನಿಗೆ, ತಿಂಡಿಯ ಪ್ಯಾಕೇಟನ್ನು ಸೆಕ್ಯುರಿಟಿ ಹತ್ತಿರ ಕೊಟ್ಟುಹೋಗಲು ಹೇಳಿ, ಫೋನು ಇಟ್ಟನೋ ಇಲ್ಲವೋ ಅದು ಮತ್ತೆ ಬೆಳಗಿತು: 'ಏನೋ, ಇವತ್ತೂ ಟ್ರಾಫಿಕ್ ಅಲ್ಲಿ ಕಚ್ಕೊಂಡಿದೀಯಾ?' – ಮೊನ್ನೆ ಮೊನ್ನೆ ಕಂಪನಿ ಸೇರಿದ ಸುಮಲತಾ, ಟೀಮಿನ ಒಬ್ಬಳೇ ಕನ್ನಡಿಗಳು ಅನ್ನೋ ಸಲುಗೆಯಲ್ಲಿ ಫೋನ್ ಮಾಡಿದ್ದಳು. 'ಇಂದು ಅತಿಯಾಯ್ತು; ಬಂದೆ ತಡ್ಕೊಳೆ' ಎಂದು ರೇಗಿ, ಫೋನಿಟ್ಟು ಬಾತ್‌ರೂಮಿಗೆ ಹೋದ...

ಸುದೀಪ್ತಾ ಸಾಮಾನ್ಯವಾಗಿ ಇಷ್ಟು ಬೇಗನೆ ಆಫೀಸಿಗೆ ಬರುವುದಿಲ್ಲ; ಮೊನ್ನೆಯ ಮೀಟಿಂಗಿನಲ್ಲಿ ತೀರ್ಮಾನವಾದಂತೆ ಇವತ್ತು ಮುಗಿಯಬೇಕಾದ ಕೆಲಸವು ಇನ್ನೂ ಶುರುವೇ ಆಗಿಲ್ಲ! ಹೊಸ ಮನೆಯಲ್ಲಿ, ಯಾವ ಕೆಲಸವನ್ನು ಎಲ್ಲಿಂದ ಶುರು ಮಾಡುವುದೆಂದೂ ತಿಳಿಯದೆ, ನಾಳೆ ಹ್ಯಾಗೂ ಅನಿ ಬರುತ್ತಾನೆ–ಅವನೊಂದಿಗೆ ಎಲ್ಲವನ್ನೂ ಓರಣವಾಗಿ ಇಟ್ಟರಾಯಿತು ಎಂದುಕೊಂಡು, ಬೇಗನೆ ಮನೆಯನ್ನು ಬಿಟ್ಟು, ಆಫೀಸಿನಲ್ಲಿಯೇ ಬ್ರೆಕ್‌ಫಾಸ್ಟ್ ಮುಗಿಸಿ, ತನ್ನ ಟೀಮಿನವರು ಇನ್ನೇನು ಬರುತ್ತಾರೆಂದು ಕಾಯುತ್ತಾ, ಗೂಗಲಿನಲ್ಲಿ ಮುಳುಗಿದ್ದಳು...

ಹೀಗೆ ಇವರಿಬ್ಬರೂ ತಮ್ಮನ್ನು ಕ್ಷಣಕ್ಷಣವೂ ತೊಡಗಿಸಿಕೊಂಡಿರುತ್ತಿದ್ದ ಕೆಲಸಗಳನ್ನು ಬೇಕೆಂದೇ ಬದಿಗೊತ್ತಿಕೊಂಡು, ಇಲ್ಲಸಲ್ಲದ ನೆವಹೂಡಿ ಬರುವ ನೆನಪುಗಳನ್ನು ದೂರವಿಡಲು ಪ್ರಯತ್ನಿಸುತ್ತಿದ್ದರು. ನೆನಪುಗಳೆಂದರೆ ಏನು, ಊಟದ ತಟ್ಟೆಯ ಮೇಲೆ ಬಂದು ಕೂರಲು ಹವಣಿಸುವ ನೊಣವೆ?

ಋತ ಮತ್ತು ಪೂಂಗವನಮ್ ಪಿಯುಸಿಯಿಂದ ಪೀಜಿಯವರೆಗೆ ಜೀವದ ಗೆಳೆಯರು. ಆದರೆ, ಸಾಧಾರಣ ಮೈಕಟ್ಟಿನ ಅಸಾಧಾರಣ ಬುದ್ಧಿಮತ್ತೆಯ ಸುದೀಪ್ತಾ ಇವರಿಬ್ಬರೊಡನೆಯೂ ಸ್ನೇಹದಿಂದಲೇ ಇದ್ದು, ಋತನಿಗೆ ಸ್ವಲ್ಪ ಹೆಚ್ಚು ಹತ್ತಿರ ಬಂದಳು. ಇನ್ನೇನು ಅವರಿಬ್ಬರು ಮದುವೆಯಾಗುತ್ತಾರೆ ಅನ್ನುವುದಕ್ಕೂ ಪೂಂಗವನಮ್ ಅಮೆರಿಕಾಕ್ಕೆ ಹೋಗುವುದಕ್ಕೂ ಸಮನಾಯಿತು.

ಋತ ಮತ್ತು ಸುದೀಪ್ತಾ ಹನಿಮೂನಿಗೆ ಹೋಗಲಿಲ್ಲ; ಹಾಗೆ ಹೋಗಬೇಕೆಂದು ಅವರಿಗೆ ಅನ್ನಿಸಲೂ ಇಲ್ಲ! ಅವರಿಗೆ ಮಕ್ಕಳು ಬೇಕೇಬೇಕೆಂದಾಗಲಿ, ಬೇಡವೇ ಬೇಡವೆಂದಾಗಲೀ ಯಾವತ್ತೂ ಇರಲಿಲ್ಲ– ಅವು ತಾವಾಗಿಯೇ ಹುಟ್ಟಲಿಲ್ಲ. ಇಬ್ಬರೂ ದುಡಿಯುತ್ತಿದ್ದರು, ಇಬ್ಬರೂ ಖರ್ಚುಮಾಡುತ್ತಿದ್ದರು. ಯಾರಿಗೆ ಎಷ್ಟು ಲಕ್ಷದ ಪ್ಯಾಕೇಜು ಎಂದು ಇಬ್ಬರಿಗೂ ಗೊತ್ತಿತ್ತು–ಗೊತ್ತಿರಲಿಲ್ಲ.

ಸುಖ ದಾಂಪತ್ಯದ ಪ್ರಾರಂಭದ ವರ್ಷಗಳಲ್ಲಿ ಅವರು ಜಗಳವಾಡಿಯೇ ಇಲ್ಲವೆಂದಲ್ಲ; ಸ್ವಯಂಪ್ರಭೆಯುಳ್ಳ ಎರಡು ನಕ್ಷತ್ರಗಳು ಒಂದೇ ಆಗಿ ಕೋಟಿಸೂರ್ಯ ಸಮಪ್ರಭೆಯಲ್ಲಿ ಬೆಳಗುವ, ನಂತರ ತಣಿದು ಕೆಂಪಾಗುವ ವಿಸ್ಮಯವಾಗಿರುತ್ತಿದ್ದವು–ಅವರ ವಾಕ್ಸಮರ: 'ಈ ಮಹಾನಗರದ ಔಟ್‌ಸ್ಕರ್ಟ್ಸ್‌ನಲ್ಲಿ ವಿಲ್ಲಾ ಕೊಳ್ಳೋಣ?' 'ಬ್ಯಾಡ, ಒಂದೇ ಜಾಗ ಬೋರಾಗುತ್ತೆ–ದೊಡ್ಡ